# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

## ಓ ಎಸ್ 82/2022

ಪಿಡಬ್ಲ್ಯೂ – 3

**ಸಾಕ್ಷಿಯು ದಿಃ 28.08.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಇ ಮಹದೇವ ಕುಮಾರ್ |
| ತಂದೆಯ ಹೆಸರು | : | ಲೇಟ್ ಈರೇಗೌಡ |
| ವಯಸ್ಸು | : | 70 ವರ್ಷ |
| ವೃತ್ತಿ | : | ವಕೀಲರು |
| ವಾಸಸ್ಥಳ | : | ನಂಜನಗೂಡು |

**ಮುಖ್ಯ ವಿಚಾರಣೆ : ವಾದಿ ಪರ ಎಸ್ ಎಂ ಪಿ ವಕೀಲರಿಂದ**

ನಾನು ಕಳೆದ 43 ವರ್ಷಗಳಿಂದ ವಕೀಲ ವೃತ್ತಿ ಮಾಡಿಕೊಂಡಿದ್ದೇನೆ. ದಿನಾಂಕಃ 18.01.2022 ರಂದು ವಾದಿ ಆರ್ ಕೆ ಸೋಮಶೇಖರ್ ಮತ್ತು ಪ್ರತಿವಾದಿಗಳಾದ ಶ್ರೀನಿವಾಸ ಮತ್ತು ಶಿವಶಂಕರ್ ರವರು ನಂಜನಗೂಡಿನ ನನ್ನ ಕಛೇರಿಗೆ ವಾಯಿದೆ ಮುಂದೂಡಿಕೆ ಕರಾರು ಮಾಡಿಕೊಳ್ಳಲು ಬಂದಿದ್ದು, ಹಳೆಯ ಕರಾರನ್ನು ಸಹ ನನ್ನ ಮುಂದೆ ಹಾಜರು ಪಡಿಸಿದ್ದರು. ಉಭಯ ಪಾರ್ಟಿಗಳು ಒಪ್ಪಿದ ರೀತಿಯಲ್ಲಿ ವಾಯಿದೆ ಮುಂದೂಡಿಕೆ ಕರಾರನ್ನು ಮಾಡಿಕೊಟ್ಟಿರುತ್ತೇನೆಂದು ಸಾಕ್ಷಿಯು ನಿಪಿ–2 ದಾಖಲೆಯ ಕೊನೆ ಪುಟದ ಸೀಲ್ ಇರುವ ಸ್ಥಳದಲ್ಲಿರುವ ನಿಪಿ–2(ಇ) ಸಹಿ ತಮ್ಮದೆಂದು ನೋಡಿ ಗುರುತಿಸಿರುತ್ತಾರೆ. ಆ ಸಮಯದಲ್ಲಿ ವಾದಿ, 1 ಮತ್ತು 2ನೇ ಪ್ರತಿವಾದಿಗಳು ಹಾಗೂ

ಸಾಕ್ಷಿಗಳಾದ ಮಹೇಶ ಆರ್.ಆರ್, ಸಿ.ಎಂ ಮಹೇಶ ರವರು ಹಾಜರಿದ್ದು, ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆಂದು ಸಾಕ್ಷಿಯು ನಿಪಿ-2(ಎ) ಯಿಂದ (ಡಿ) ವರೆಗಿನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಬರೆಸಿಕೊಳ್ಳುವವರು ಎಂಬಲ್ಲಿರುವ ಸಹಿಯನ್ನು ಸಾಕ್ಷಿಯು ಅದು ವಾದಿ ಸೋಮಶೇಖರ್ ರವರ ಸಹಿಯಾಗಿದ್ದು, ನನ್ನ ಸಮಕ್ಷಮ ಮಾಡಿದ್ದಾರೆಂದು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಎಫ್) ಗುರುತಿಸಲಾಯಿತು.

**ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ